Resolutions Passed by the State Village Officers' Association

*Q.—420. Sri M. LINGANNA (Nanjangud).—

Will the Government be pleased to state :—

(*a*) whether they have received any resolutions from the State Village Officers' Association ;

(*b*) if so, the details thereof ;

(*c*) the action taken thereon ?

*A.—Sri M. P. PATIL (Minister for Revenue).—

(*a*) A copy of resolutions has been received.

(*b*) The resolutions are given in the Appendix (*vide* appendix to Answer to Question No. 325.)

(*c*) The matter is under consideration.

ಶ್ರೀ ಬಿ. ಮಾಧವಾಚಾರ್.—ಈ ಗ್ರಾಮಾಧಿಕಾರಿ ವರ್ಗದವರು ಏನಾದರೂ ಅಲ್ಪಮೇಟಂ ವಗೈರೆ ಕೊಟ್ಟಿದ್ದಾರೆಯೇ, ಸ್ವಾಮಿ ?

ಶ್ರೀ ಎಂ. ಪಿ. ಪಾಟೀಲ್.—ಹೌದು, ಕೊಟ್ಟಿದ್ದಾರೆ.

ಶ್ರೀ ಬಿ. ಮಾಧವಾಚಾರ್.—ಅದಕ್ಕೇನಾದರೂ ಪ್ರತಿಯಾಗಿ ಸರ್ಕಾರದವರು ಭರವಸೆ ಅಥವಾ ಉತ್ತರ ಕೊಟ್ಟಿದ್ದಾರೆಯೇ ?

ಶ್ರೀ ಎಂ. ಪಿ. ಪಾಟೀಲ್.—ಅವರು ವ್ಯಕ್ತಿಶಃ ಯಾರೂ ಸ್ಟ್ರೈಕ್ ಮಾಡುತ್ತೇವೆ ಎಂದಾಗಲಿ ನಾನ್-ಕೋಆಪರೇಷನ್ ಮಾಡುತ್ತೇವೆ ಎಂದಾಗಲಿ ತಿಳಿಸಿಲ್ಲ. ವ್ಯಕ್ತಿಶಃ ಯಾರಾದರೂ ಆ ರೀತಿ ತಿಳಿಸಿದರೆ ಅವರ ಮೇಲೆ ಕ್ರಮ ಕೈಕೊಳ್ಳಬಹುದು.

ಶ್ರೀ ಬಿ. ಮಾಧವಾಚಾರ್.—ಅವರ ಅಸೋಸಿಯೇಷನ್‌ನಿಂದ ಬಂದಂಥ ಅಲ್ಪಮೇಟಮ್ಮಿಗೆ ಸರ್ಕಾರದಿಂದ ಏನಾದರೂ ಉತ್ತರಕೊಡಲಾಗಿದೆಯೇ ಎಂಬುದು ನನ್ನ ಪ್ರಶ್ನೆ.

ಶ್ರೀ ಎಂ.ಪಿ. ಪಾಟೀಲ್.—ಏನೂ ಉತ್ತರ ಕೊಟ್ಟಿಲ್ಲ.

ಶ್ರೀ ಎಸ್. ಕರಿಯಪ್ಪ.—ಗ್ರಾಮಾಧಿಕಾರಿಗಳ ಬೇಡಿಕೆಗಳೇನು ?

ಶ್ರೀ ಎಂ. ಪಿ. ಪಾಟೀಲ್.—ಆ ಬೇಡಿಕೆಗಳೇನು ಎಂಬುದನ್ನು ಉತ್ತರದಲ್ಲಿಯೇ ಕೊಟ್ಟಿದೆ.

ಶ್ರೀ ಎಸ್. ಕರಿಯಪ್ಪ.—ಆ ಬೇಡಿಕೆಗಳಲ್ಲಿ ಎಷ್ಟನ್ನು ತಾವು ನಡೆಸಿಕೊಡುತ್ತೀರಿ ಎಂದು ಇದುವರೆಗೆ ಆಶ್ವಾಸನವನ್ನು ಕೊಟ್ಟಿದ್ದೀರಿ ?

ಶ್ರೀ ಎಂ. ಪಿ. ಪಾಟೀಲ್.—ಅವರು ಜನವರಿ 19ನೆಯ ತಾರೀಖಿನ ಎಲ್ಲ ತಮ್ಮ ಬೇಡಿಕೆಗಳನ್ನು ನಮ್ಮ ಕಡೆಗೆ ಕಳುಹಿಸಿದ್ದಾರೆ. ಅದು 22ನೆಯ ತಾರೀಖಿನ ದಿನ ನಮ್ಮ ಕಡೆಗೆ ಬಂದಿದೆ.

ಶ್ರೀ ಎಸ್. ಕರಿಯಪ್ಪ.—ಆ ಬೇಡಿಕೆಗಳನ್ನು ಎಷ್ಟು ಮಟ್ಟಿಗೆ ನಡೆಸಿಕೊಡುತ್ತೀರಿ ಎಂದು ಅವರಿಗೆ ಲಿಖಿತ ಮೂಲಕ ತಿಳಿಸಿದ್ದೀರಿ ?

ಶ್ರೀ ಎಂ. ಪಿ. ಪಾಟೀಲ್.—ಸಹಾನುಭೂತಿಯಿಂದ ಪರಿಶೀಲಿಸುತ್ತೇವೆ ಎಂದು ಹೇಳಿದ್ದೇವೆ.

ಶ್ರೀ ಎಸ್. ಕರಿಯಪ್ಪ.—ಲಿಖಿತಮೂಲಕ ತಿಳಿಸಿದ್ದರೆ, ಈಗ ನಡೆದಿರುವ ಚಳವಳಿ ಅಲ್ಲಿಗೇ ಮುಕ್ತಾಯ ಗೊಳ್ಳುತ್ತಿತ್ತಲ್ಲವೇ ?

ಶ್ರೀ ಎಂ. ಪಿ. ಪಾಟೀಲ್.—ಸಹಾನುಭೂತಿಯಿಂದ ವಿಚಾರಮಾಡುತ್ತೇವೆ ಎಂದು ತಿಳಿಸಿದೆ. ಹಾಗಿದ್ದರೂ, ಅವರೂ ಚಳವಳಿಮಾಡುತ್ತಾರೆಯೇ, ನಾನ್ ಕೋ-ಆಪರೇಷನ್ ಮಾಡುತ್ತಾರೆಯೇ, ಸ್ಟ್ರೈಕ್ ಮಾಡುತ್ತಾರೆಯೇ ಎಂದು ಸರ್ಕಾರ ವಿಚಾರಮಾಡುತ್ತ ಹೋಗುವುದರಿಂದ ಯಾವ ಪ್ರಯೋಜನವೂ ಇಲ್ಲ.

ಶ್ರೀ ಎಸ್. ಕರಿಯಪ್ಪ.—ಅವರ ಬೇಡಿಕೆಗಳೆಲ್ಲಾ ಯೋಗ್ಯ, ನ್ಯಾಯವಾದುವುಗಳು ಎಂದು ಒಪ್ಪಿಕೊಂಡ ಮೇಲೆ, ಇಷ್ಟುಮಟ್ಟಿಗೆ ನಡೆಸಿಕೊಡುತ್ತೇವೆ ಎಂದು ಹೇಳಿದ್ದರೆ ಅದರಿಂದ ತಮ್ಮ ಕೆಲಸ ಸುಗಮವಾಗಿ ನಡೆಯುವುದಕ್ಕೆ ಅವಕಾಶವಾಗುತ್ತಿತ್ತಲ್ಲವೇ ?

ಶ್ರೀ ಎಂ. ಪಿ. ಪಾಟೀಲ್.—ಆ ಬೇಡಿಕೆಗಳಲ್ಲಿ ಎಷ್ಟು ಮಟ್ಟಿಗೆ ನಡೆಸಬಹುದು, ಎಷ್ಟು ಮಟ್ಟಿಗೆ ಇಲ್ಲ ಎಂದು ಹೇಳುವುದು ಅಸಾಧ್ಯವಾದ ಮಾತು. ಬಹಳ ವಿಚಾರ ಮಾಡಬೇಕು. ಮೈಸೂರು ರಾಜ್ಯದಲ್ಲಿ ಐದು ಪ್ರದೇಶಗಳಿದ್ದು ಬೇರೆಬೇರೆ ಕಡೆ ಬೇರೆಬೇರೆ ಸಿನ್ಸಂಗಳಿವೆ. ಹೆರೆಡಿಟರಿ ರೈಟ್ಸ್ ಇದ್ದು, ಸಾವಿರಾರು ವರ್ಷಗಳಿಂದ ಈ ಪದ್ಧತಿ ನಡೆದು ಬಂದಿದೆ. ಅಂತಹದರಲ್ಲಿ ಈ ಬೇಡಿಕೆಗಳನ್ನು ಇಷ್ಟು ಅಲ್ಪಕಾಲದಲ್ಲಿ ವಿಚಾರ ಮಾಡುವುದು ಅಸಾಧ್ಯವಾದ ಮಾತು. ಆದರೂ ಸಹಾನುಭೂತಿಯಿಂದ ವಿಚಾರಮಾಡುತ್ತೇವೆ ಎಂದು ಅವರಿಗೆ ಮೊದಲಿನಿಂದಲೂ ಆಶ್ವಾಸನವನ್ನು ಕೊಟ್ಟಿದ್ದೇವೆ.

ಶ್ರೀ ಎಸ್. ಕರಿಯಪ್ಪ.—ಸಹಾನುಭೂತಿಯಿಂದ ಪರ್ಯಾಲೋಚಿಸುತ್ತೇವೆ ಎಂದು ಹೇಳಿದಮೇಲೆ, ಸಹಾನುಭೂತಿ ಎಷ್ಟುಮಟ್ಟಿಗೆ ಇದೆ ಎನ್ನುವುದನ್ನು ಕೂಡ ವ್ಯಕ್ತಪಡಿಸಬಹುದಲ್ಲಾ ?

ಶ್ರೀ ಎಂ. ಪಿ. ಪಾಟೀಲ್.—ಅದನ್ನು ವ್ಯಕ್ತಪಡಿಸುವುದಕ್ಕೂ ಸ್ವಲ್ಪ ಕಾಲಾವಧಿ ಬೇಕಾಗುತ್ತದೆ. ಇಷ್ಟರಲ್ಲಿಯೇ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಸ್. ಕರಿಯಪ್ಪ.—ತಮ್ಮ ಮುಂದೆ ಈ ಬೇಡಿಕೆಗಳು ಬಂದು ಎಷ್ಟು ಕಾಲವಾಗಿದೆ ?

ಶ್ರೀ ಎಂ. ಪಿ. ಪಾಟೀಲ್.—ಜನವರಿ 19ನೆಯ ತಾರೀಖಿನ ದಿನ ಅವರು ಬೇಡಿಕೆಗಳನ್ನು ಪಾಸು ಮಾಡಿಕೊಂಡಿದ್ದಾರೆ. ಅವರು ಹಾಗೆ ಪಾಸುಮಾಡಿಕೊಂಡಿದ್ದ ನಿರ್ಣಯವು 22ನೆಯ ತಾರೀಖಿನ ದಿನ ನಮಗೆ ಮುಟ್ಟಿದೆ. 25ನೆಯ ತಾರೀಖಿನ ಒಳಗೆ ನಿರ್ಧರ ತಿಳಿಸಬೇಕೆಂದು ಅಲ್ಪಮೇಟಂ ಕೊಟ್ಟಿದ್ದಾರೆ.

ಶ್ರೀ ಎಸ್. ಕರಿಯಪ್ಪ.—ಅವರಿಗೆ ತಮ್ಮ ಮನೋಗತವನ್ನು ತಿಳಿಸಲು ಈ ಎರಡು ತಿಂಗಳುಗಳ ಅವಧಿ ಸಾಕಾಗಲಿಲ್ಲವೆ ?

ಶ್ರೀ ಎಂ. ಪಿ. ಪಾಟೀಲ್.—ಈ ಎರಡು ತಿಂಗಳುಗಳಲ್ಲಿ ಚುನಾವಣೆ ಇತ್ಯಾದಿ ಬಹಳ ಕೆಲಸಗಳು ನಡೆದಿವೆ ಆದ್ದರಿಂದ ಮಾಹಿತಿ ತರಿಸಿ ವಿಚಾರಮಾಡುವುದಕ್ಕೆ ಸ್ವಲ್ಪ ತಡವಾಗಿದೆ.

ಶ್ರೀ ಎಸ್. ಕರಿಯಪ್ಪ.—ಕಂದಾಯ ವಸೂಲಿ ಕ್ರಮ ಎಷ್ಟುಮಟ್ಟಿಗೆ ಆಗಬೇಕೋ ಅಷ್ಟುಮಟ್ಟಿಗೆ ಆಗಿದೆಯೇ ಎಂಬುದನ್ನು ಪರ್ಯಾಲೋಚಿಸಿಲ್ಲವೇ ?

ಶ್ರೀ ಎಂ. ಪಿ. ಪಾಟೀಲ್.—ಚುನಾವಣೆಯ ಕೆಲಸದಲ್ಲಿ ಎಲ್ಲ ಅಧಿಕಾರಿಗಳೂ ತೊಡಗಿದ್ದರಿಂದ ಆ ಕೆಲಸ ಹೇಗೆ ಮಾಡುವುದಕ್ಕೆ ಸಾಧ್ಯವೋ ನನಗಂತೂ ತಿಳಿಯದು.

ಶ್ರೀ ವಿ. ಆರ್. ನಾಯ್ಡು.—ಈ ಗ್ರಾಮಾಧಿಕಾರಿಗಳ ಕುಂದುಕೊರತೆಗಳ ಬಗ್ಗೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಏನಾದರೂ ಭರವಸೆಯನ್ನು ಕೊಡುವುದಕ್ಕೆ ಇಷ್ಟಪಡುತ್ತಾರೆಯೇ ?

*ಶ್ರೀ ಎಸ್. ನಿಜಲಿಂಗಪ್ಪ.—ನಿನ್ನೆ ಸ್ಪಷ್ಟವಾಗಿ ಹೇಳಿದ್ದೇನೆ. ಅದಕ್ಕಿಂತ ಹೆಚ್ಚಾಗಿ ಹೇಳುವುದಕ್ಕೆ ಕಾರಣವಿಲ್ಲ.

ಶ್ರೀ ಎ. ಆರ್. ನಾಯ್ಡು.—ಪರಿಸ್ಥಿತಿ ಉದ್ರೇಕವಾಗದಂತೆ ನೋಡಿಕೊಳ್ಳಬೇಕೆಂದು ಮನವಿಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಅವರು ಉದ್ರಿಕ್ತರಾಗತಕ್ಕ ಸ್ಥಿತಿಯಲ್ಲಿಲ್ಲ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಈ ಗ್ರಾಮ ನೌಕರರು ತಮ್ಮ ಕುಂದುಕೊರತೆಗಳನ್ನು ಸರ್ಕಾರದ ಮುಂದೆ ಎರಡು ತಿಂಗಳ ಹಿಂದೆಯೇ ಇಟ್ಟಾಗ್ಗೂ ಕೂಡ ಅದನ್ನು ಈವರೆಗೆ ಏಕೆ ಬಗೆಹರಿಸಿಲ್ಲ? ಅವರು ಅನೇಕ ವರುಷಗಳಿಂದ ತಮ್ಮ ಕುಂದುಕೊರತೆಗಳನ್ನು ಸರ್ಕಾರದ ಮುಂದೆ ಇಡುತ್ತಿರುವುದು ನಿಜವಲ್ಲವೇ?

ಶ್ರೀ ಎಸ್. ನಿಜಲಿಂಗಪ್ಪ.—ಹೌದು, ಇಡುತ್ತಾ ಇದ್ದಾರೆ ಎಂದು ಗೊತ್ತಿದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಅದರ ಬಗ್ಗೆ ಸರ್ಕಾರದವರು ಯಾವ ಯೋಚನೆಯನ್ನೂ ಮಾಡಿಲ್ಲ ಎಂದು ತಿಳಿದುಕೊಳ್ಳೋಣವೇ?

ಶ್ರೀ ಎಸ್. ನಿಜಲಿಂಗಪ್ಪ.—ಅತ್ಯಂತ ತೀವ್ರವಾಗಿ ಸರಕಾರವು ಆಲೋಚಿಸುತ್ತಿದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಹಳೆಯ ಮೈಸೂರಿನ ಎಷ್ಟು ತಾಲ್ಲೂಕುಗಳಲ್ಲಿ ಮುಷ್ಕರ ನಡೆಯುತ್ತಿದೆ, ಸ್ವಾಮಿ?

ಶ್ರೀ ಎಸ್. ನಿಜಲಿಂಗಪ್ಪ.—ಮುಷ್ಕರ ನಡೆಯುತ್ತಿಲ್ಲ, ಎಲ್ಲಿಯೋ ಒಂದೆರಡುಕಡೆ ಮಾತ್ರ ನಡೆಯುತ್ತಾ ಇದೆ ಎಂದು ವರ್ತಮಾನ ಬಂದಿದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಹಳೆಯ ಮೈಸೂರಿನಲ್ಲಿ ಶೇಕಡ 60—70 ರಷ್ಟು ಗ್ರಾಮ ನೌಕರರಿಂದ ಆಗಬೇಕಾದ ಕೆಲಸ ಆಗದೇ ನಿಂತು ಹೋಗಿದೆಯಲ್ಲವೆ?

ಶ್ರೀ ಎಸ್. ನಿಜಲಿಂಗಪ್ಪ.—ನಿಂತಿಲ್ಲ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಈಗ ಸರ್ಕಾರದ ಕಂದಾಯ ವಸೂಲಿ ಆಗುತ್ತಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಹೌದು, ಅನೇಕ ಕಡೆ ವಸೂಲಿಯಾಗುತ್ತಿದೆ. ಎಲ್ಲೋ ಒಂದೆರಡು ಕಡೆ ಮಾತ್ರ ಸ್ವಲ್ಪ ತೊಂದರೆಯಾಗಿದೆ ಅಷ್ಟೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಎಷ್ಟು ಜನ ಗ್ರಾಮ ನೌಕರರು ಮುಷ್ಕರ ಹೂಡಿದ್ದಾರೆ? ಈ ಬಗ್ಗೆ ಅಂಕಿಅಂಶವನ್ನು ಸಂಗ್ರಹಿಸಿದ್ದೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಸಂಗ್ರಹಿಸಿಲ್ಲ. ಸ್ವಲ್ಪ ಕಾಲ ಕೊಟ್ಟರೆ ಸದಸ್ಯರಿಗೆ ಈ ಅಂಕಿ ಅಂಶಗಳನ್ನು ತಿಳಿಸುತ್ತೇನೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಸರ್ಕಾರದವರು ತೀವ್ರವಾಗಿ ಯೋಚನೆ ಮಾಡದಿರುವುದರಿಂದ ಈ ರಾಜ್ಯಸರ್ಕಾರದ ಒಂದು ಯಂತ್ರ ಕಳಚಿ ಬೀಳುವ ಪರಿಸ್ಥಿತಿಗೆ ತರತಕ್ಕ ಪ್ರಯತ್ನವನ್ನು ಗ್ರಾಮ ನೌಕರರು ಮಾಡುತ್ತಿದ್ದಾರೆಯಲ್ಲವೆ?

ಶ್ರೀ ಎಸ್. ನಿಜಲಿಂಗಪ್ಪ.—ಸದಸ್ಯರು ಹೇಳುವುದನ್ನು ಒಪ್ಪುವುದಿಲ್ಲ. ತೀವ್ರವಾಗಿ ಆಲೋಚನೆ ಮಾಡುತ್ತಿದ್ದೇವೆ ಎಂದು ಹೇಳಿದೆ. 'ಆಲೋಚನೆ ಮಾಡದೇ ಇರೋಣದರಿಂದ' ಎಂದು ಹೇಳುವುದರಲ್ಲಿ ಅರ್ಥವಿಲ್ಲ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಪಟೇಲ್ ಶ್ಯಾನುಭೋಗರುಗಳ ಜೊತೆಯಲ್ಲಿಯೇ ತೋಟಿ, ತಳವಾರಿಗಳ ವಿಷಯವನ್ನೂ ಕೂಡ ಸರ್ಕಾರದವರು ಯೋಚನೆ ಮಾಡುತ್ತೀರಾ?

ಶ್ರೀ ಎಸ್. ನಿಜಲಿಂಗಪ್ಪ.—ಹೌದು ಎಂದು ಹೇಳಿದ್ದೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಎಷ್ಟು ದಿವಸಗಳಲ್ಲಿ ಅಥವಾ ಎಷ್ಟು ಕಾಲಾವಧಿಯಲ್ಲಿ ಅವರಿಗೆ ತಾವು ಪರಿಹಾರವನ್ನು ಕೊಡುವ ವಿಷಯವಾಗಿ ಯೋಚನೆ ಮಾಡುತ್ತೀರಿ?

ಶ್ರೀ ಎಸ್. ನಿಜಲಿಂಗಪ್ಪ.—ಆದಷ್ಟು ಜಾಗ್ರತೆ ಮಾಡುತ್ತೇವೆ ಎಂದು ಹೇಳಿದ್ದೇನೆ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಆದಷ್ಟು ಜಾಗ್ರತೆ ಎಂದರೆ ತಿಂಗಳಾನುಗಟ್ಟಲೆ ಆಗಬಹುದು, ವರ್ಷಾನುಗಟ್ಟಲೆ ಆಗಬಹುದು. ಆದ್ದರಿಂದ ಎಷ್ಟು ಕಾಲಾವಧಿಯಲ್ಲಿ ಇದರ ಪರಿಹಾರವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಿ ಎಂಬುದು ನನ್ನ ಪ್ರಶ್ನೆ.

ಅಧ್ಯಕ್ಷರು.—ಆದಷ್ಟು ತೀವ್ರವಾಗಿ ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿದರು.

ಶ್ರೀ ಎಲ್. ಸಿದ್ದಪ್ಪ.—ಸೆಂಟ್ರಲ್ ಅಸೋಸಿಯೇಷನ್ ನಿಂದ ಸರ್ಕಾರಕ್ಕೆ ಕಳುಹಿಸಿದ ಮನವಿಗೆ ಜವಾಬು ಕೊಟ್ಟಿದ್ದೀರಾ?

ಶ್ರೀ ಎಸ್. ನಿಜಲಿಂಗಪ್ಪ.—ನಿರ್ಣಯ ಬಂದಿದೆ. ಅಲ್ಲದೆ ಮುಖತಃ ಬಂದು ನೋಡಿದ್ದಾರೆ.

ಶ್ರೀ ಎಲ್. ಸಿದ್ದಪ್ಪ.—ಸೆಂಟ್ರಲ್ ಅಸೋಸಿಯೇಷನ್ ನಿಂದ ಮೆಮೊರಾಂಡಂ ಬಂದಿರುವುದಕ್ಕೆ ಲಿಖಿತ ಮೂಲಕ ಜವಾಬು ಕೊಟ್ಟಿದೆಯೆ?

ಶ್ರೀ ಎಸ್. ನಿಜಲಿಂಗಪ್ಪ.—ಅವರೇ ಬಂದು ನೋಡಿರುವುದರಿಂದ ಮತ್ತೆ ಜವಾಬು ಕೊಡಬೇಕಾದ ಅವಶ್ಯಕತೆಯಿಲ್ಲ.

Sri H. S. METGUD.—Does the Government think that there should be a general and one policy with regard to deciding the question of Village Officers?

Sri S. NIJALINGAPPA.—Yes, that is being considered and a uniform policy is being evolved.

ಶ್ರೀ ಜಿ. ಪುಟ್ಟಸ್ವಾಮಿ.—ಗ್ರಾಮಾಧಿಕಾರಿಗಳ ಮುಷ್ಕರ ನಡೆಯುತ್ತಿರುವುದರಿಂದ ಎಲ್ಲೆಲ್ಲ ಕೆಲಸಕ್ಕೆ ತೊಂದರೆಯಾಗಿದೆ?

ಶ್ರೀ ಎಸ್. ನಿಜಲಿಂಗಪ್ಪ.—ಈಗಲೇ ಹೇಳಲು ಸಾಧ್ಯವಿಲ್ಲ. ಬೇಕಾದರೆ ವಿಚಾರಿಸಿ ತಿಳಿಸುತ್ತೇನೆ.

ಶ್ರೀ ಬಿ. ರಾಚಯ್ಯ.—ಮುಖ್ಯ ಮಂತ್ರಿಗಳು ಭರವಸೆ ಕೊಟ್ಟಮೇಲೆ ಮುಷ್ಕರ ನಿಲ್ಲಿಸಬೇಕೆಂದು ಪತ್ರಿಕೆಗಳಲ್ಲಿ ಮನವಿ ಮಾಡಿಕೊಂಡಿರುವುದು ನಿಜವೆ?

ಶ್ರೀ ಎಸ್. ನಿಜಲಿಂಗಪ್ಪ.—ನಿಜ.

ಶ್ರೀ ಬಿ. ರಾಚಯ್ಯ.—ತೋಟಿ ತಳವಾರಿಗೆ ಪೋಟಿಗೆ ಕೊಡಲು ಪ್ರಯತ್ನ ಮಾಡಿದೆಯೆ?

ಶ್ರೀ ಎಸ್. ನಿಜಲಿಂಗಪ್ಪ.—ಅವರಿಗೆ ಪೋಟಿಗೆ ಕೊಡುತ್ತಿಲ್ಲ, ಅವರಿಗೆ ಕೊಡುವುದು ಮಿರಾಸೆ.

Sri G. SIVAPPA.—May I know whether the Government is going to give interim relief or permanent relief to these Village Officers?

*Asterisk indicates that the remarks or speeches have not been revised by the Member concerned.

Sri S. NIJALINGAPPA.—It is not possible to say anything definitely just now.

ಶ್ರೀ ಜಿ. ಶಿವಪ್ಪ.—ಪರಿಹಾರ ಕೊಡಬೇಕೆಂದು ನಿರ್ಧರಿಸುವಾಗ ನಂಸ್ಥಾನದಲ್ಲಿ ಜಾರಿಯಲ್ಲಿರುವ ನಾಲ್ಕು ವಿಧವಾದ ಪದ್ಧತಿಗಳನ್ನು ಗಮನಕ್ಕೆ ತೆಗೆದು ಕೊಂಡು ಯೂನಿಫಾರಮ್ ಪದ್ಧತಿಯನ್ನು ಕ್ಯೆಗೊಳ್ಳುವಂತೆ ವ್ಯವಸ್ಥೆ ಮಾಡುವಿರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾಡುವುದಾಗಿ ಹೇಳಿದ್ದೇವೆ.

ಶ್ರೀ ಪಿ. ಸಿ. ಉತ್ತಯ್ಯ.—ಕೊಡಗು ಪ್ರದೇಶದ ಗ್ರಾಮಾಧಿಕಾರಿಗಳಿಂದ ದೂರುಗಳೇನಾದರೂ ಬಂದಿವೆಯೆ ?

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ತಿಳಿದ ಹಾಗೆ ಬಂದಿಲ್ಲ.

ಶ್ರೀ ಪಿ. ಸಿ. ಉತ್ತಯ್ಯ.—ವಿಚಾರ ಮಾಡಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಬರಲಿ, ಬಾರದಿರಲಿ ಅಲ್ಲನ ವಿಚಾರವನ್ನೂ ಆಲೋಚಿಸುತ್ತೇವೆ.

ಶ್ರೀ ಎಚ್. ಕೆ. ಸಿದ್ದಯ್ಯ.—ತೋಟಿ ತಳವಾರರಿಗೆ ನಿರಾಶೆಯಾಗಿದೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಸ್. ನಿಜಲಿಂಗಪ್ಪ.—ಬಂದಿದೆ.

ಶ್ರೀ ಎಚ್. ಕೆ. ಸಿದ್ದಯ್ಯ.—ರೆವೆನ್ಯೂ ಕೋಡು ತಯಾರು ಮಾಡಿದಲಾಗಾಯ್ತಿನಿಂದ ಅವರಿಗೆ ಬರ ಬೇಕಾದ ಮಿರಾಸೆಯನ್ನು ವಸೂಲುಮಾಡಿ ಕೊಡಲು ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದಷ್ಟು ಅನುಕೂಲ ಮಾಡಿಕೊಡಲು ಪ್ರಯತ್ನಿಸುತ್ತೇವೆ.

Sri A. V. NARASIMHA REDDY.—What are the steps the Government have so far taken in this matter ?

Sri M. P. PATIL.—Because there are different systems in different areas we want to know the quantum of potige, etc., paid in different areas. All the relevant information is being collected. We have already collected some information and we are waiting for some more information from some other areas.

Sri A. V. NARASIMHA REDDY.—Is it not desirable to constitute a committee so that their deliberations may go a long way to solve the question ?

Sri M. P. PATIL.—In this case it is not necessary to constitute a committee. If any committee is constituted the matter will again be delayed.

ಶ್ರೀ ಟಿ. ಹನುಮಯ್ಯ.—ಪಟೇಲ ಶ್ಯಾನುಭೋಗರಿಗೆ ಪೋಟಿಗೆ ಕೊಡುವ ಹಾಗೆ ತೋಟಿ ತಳವಾರರಿಗೂ ಮಿರಾಸೆ ಕೊಡಬೇಕೆಂದು ರೆವೆನ್ಯೂ ಕೋಡಿನಲ್ಲಿದೆ. ಡಿಮ್ಯಾಂಡ್, ಕಲೆಕ್ಷ್ಷನ್, ಬ್ಯಾಲೆನ್ಸ್ ಸ್ಟೇಟ್‌ಮೆಂಟ್ ಸರ್ಕಾರದಲ್ಲಿ ತಯಾರಾಗಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಒಂದು ಅಫೀಷಿಯಲ್ ಕಮಿಟಿಯನ್ನು ನೇಮಿಸಿದ್ದೆವು. ಪ್ರಾಂತ ಪುನರ್ವಿಂಗಡಣೆಯ ದೆಸೆಯಿಂದ ಆ ಸಮಿತಿಯ ಕೆಲಸಕಾರ್ಯ ನಡೆಯಲಿಲ್ಲ. ಈಗ ಈ ವಿಚಾರವನ್ನು ಜಾಗ್ರತೆ ಇತ್ಯರ್ಥ ಮಾಡಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಟಿ. ಹನುಮಯ್ಯ.—ತೋಟಿ ತಳವಾರರಿಂದ ಪ್ರತಿನಿತ್ಯವೂ ಫ್ರೀ ಸರ್ವಿಸ್ ತೆಗೆದುಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಂ. ಪಿ. ಪಾಟೀಲ್.—ಇಲ್ಲ.

Reconstitution of Industrial Tribunal.

Q.—416. Sri D. VENKATESH (Gandhinagar).—

Will the Government be pleased to state :—

(*a*) the steps taken to reconstitute the existing Industrial Tribunal as required under the Industrial Disputes (Miscellaneous) Amendment Act or otherwise ;

(*b*) the number of Industrial Tribunals functioning at present in the State ;

(*c*) the number of cases pending before each of them ?

A.—Sri JAGANNATH RAO CHANDRIKI (Minister for Excise, Rural Industries and Labour).—

(*a*) Action is being taken and the new Tribunal will be appointed shortly.

(*b*) One.

(*c*) Sixty-two.

Sri D. VENKATESH.—Is it not a fact that the amended Industrial Disputes Act was brought into force on 10th April 1956 ?

Sri JAGANNATH RAO CHANDRIKI.—Yes.

*Sri D. VENKATESH.—Under the new Act there is no provision for the transfer of disputes referred to the old Tribunal. If a new Tribunal is appointed how does the Government propose to overcome this difficulty ?

Sri JAGANNATH RAO CHANDRIKI.—According to legal provision, the cases will be tried.

Sri D. VENKATESH.—There are no legal provisions and there is a lacuna.

Sri JAGANNATH RAO CHANDRIKI.—The cases which have already been referred to the present tribunal will be decided by them and other cases will be referred to the tribunal that will be appointed.